

# ಪುರುಷ ಪಾತ್ರ ಆದರೂ ಸೈ

## ಸಂಜನಾ ಬುರ್ಲಿ
ಝಿ ಕನ್ನಡದ 'ಪುಟ್ಟಕ್ಕನ ಮಕ್ಕಳು' ಸ್ನೇಹ

◆ **ನೀವೇನೂ ಧಾರವಾಡದವರಾ?**

ನಮ್ಮ ತಂದೆಯ ಮೂಲ ಧಾರಾವಾಡ ನಾನು ಹುಟ್ಟಿ ಬೆಳೆದಿದ್ದು ಬೆಂಗಳೂರಿನಲ್ಲಿ. ಈಗ ಅಂತಿಮ ವರ್ಷದಲ್ಲಿ ಬಿಇ ಓದುತ್ತಿದ್ದೇನೆ. ಆರೇಳು ವರ್ಷದವಳಿದ್ದಾಗಲೇ ನಟನೆಯನ್ನು ಅನುಕರಣೆ ಮಾಡುತ್ತಿದ್ದೆ. ಆ ಆಸಕ್ತಿಯನ್ನು ಶಾಲೆಯ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಸ್ತರಿಸಿ ಅದಕ್ಕೇ ಹೆಚ್ಚು ಒತ್ತು ನೀಡಲು ಆರಂಭಿಸಿದೆ. ಆಗ ಪೋಷಕರು ಮೊದಲು ಓದು ಎಂದರು. ಎಸ್‌ಎಸ್‌ಎಲ್‌ಸಿ ಮುಗಿದ ನಂತರ ಎರಡು ವರ್ಷ ರಂಗಚಟುವಟಿಯಲ್ಲಿ ಗಂಭೀರವಾಗಿ ತೊಡಗಿದೆ. ನನ್ನ ನಟನೆ ನೋಡಿ ಝೀ ಕನ್ನಡದ 'ಪತ್ತೆದಾರಿ ಪ್ರತಿಭಾ'ದಲ್ಲಿ ಪುಟ್ಟ ಪಾತ್ರಕ್ಕೆ ಆಹ್ವಾನ ಬಂತು. ಅಲ್ಲಿಯ ತನಕ ಕ್ಯಾಮೆರಾ ಎದುರಿಸಿರಲಿಲ್ಲ. ನಂತರ ಪ್ರಧಾನ ಪಾತ್ರವನ್ನೇ ಮಾಡಬೇಕು ಎಂದು ಆಡಿಷನ್ ನೀಡಲು ಆರಂಭಿಸಿದೆ. ಆ ನಿಲುವಿನಿಂದ ಸಿನಿಮಾ– ಧಾರಾವಾಹಿಗಳಲ್ಲಿ ಮಾಡಲು ಸಾಧ್ಯವಾಯಿತು.

◆ **ರಂಗದ ಬಣ್ಣ– ಕ್ಯಾಮೆರಾ ಬೆಳಕು ಓದಿಗೆ ಅಡ್ಡಿ ಮಾಡಲಿಲ್ಲವೇ?**

ಕಲೆಯನ್ನು ಪ್ಯಾಶನ್ ಎನ್ನುವಂತೆ ತಗೆದುಕೊಂಡು ಅದರ ಸಮಯವನ್ನು ಅದಕ್ಕೆ ಕೊಟ್ಟು. ನನ್ನ ಓದಿಗೂ ಸಮಯ ಮೀಸಲಿಟ್ಟಿದ್ದೇನೆ. ಹಾಗಾಗಿ ನನಗೆ ಖಾಸಗಿ ಸಮಯ ಎನ್ನುವುದೇ ಇಲ್ಲ. ಇದೇ ರೀತಿ ನಾಲ್ಕು ವರ್ಷ ಕಳೆದಿದ್ದೇನೆ. ಓದು ಮತ್ತು ಅಭಿನಯ ಎರಡಕ್ಕೂ ಸಮಯವನ್ನು ಸದ್ಯ ನೀಡುತ್ತಿದ್ದೇನೆ. ಇದರಿಂದ ನನ್ನ ಓದಿಗೆ ತೊಂದರೆ ಆಗಿಲ್ಲ. ಹಾಜರಾತಿಯ ಕೊರತೆ ಆಗಬಹುದು. ಪರೀಕ್ಷೆಯ ಹಿಂದಿನ ದಿನ ಓದಿದರೂ ಟಾಪರ್ ಆಗುತ್ತೇನೆ. ಚಿಕ್ಕ ವಯಸ್ಸಿನಿಂದಲೂ ಹೇಗೋ ಅದು ಅಭ್ಯಾಸ ಆಗಿದೆ. ಎರಡನ್ನೂ ಇಷ್ಟಪಟ್ಟು ಮಾಡುವುದರಿಂದ ಸರಿದೂಗಿಸುತ್ತೇನೆ.

◆ **ಪುರುಷನ ಪಾತ್ರವನ್ನೇ ನೀವು ಮಾಡುವ ಸನ್ನಿವೇಶ ಬಂದರೆ.**

ಖಂಡಿತ ಮಾಡುತ್ತೇನೆ. ಬೇರೆ ಬೇರೆ ಪಾತ್ರಗಳನ್ನು ನಿರ್ವಹಿಸಬೇಕು ಎನ್ನುವುದು ನನ್ನಾಸೆ. ಇದೇ ಮಾಡಬೇಕು ಎನ್ನುವ ನಿಯಂತ್ರಣ ಹಾಕಿಕೊಳ್ಳುವ ಮನಸ್ಸು ನನಗಿಲ್ಲ. ಸುರಕ್ಷಿತ ವಲಯದ ಆಚೆ ಸವಾಲನ್ನು ಎದುರಿಸಿ ಪಾತ್ರ ನಿರ್ವಹಿಸುವ ಆಸೆ ಇದೆ. ಯಾವುದೇ ಪಾತ್ರವನ್ನು ಒಪ್ಪುವುದಾದರೆ ನನ್ನ ನಟನೆಗೆ ಎಷ್ಟು ಅವಕಾಶ ಇದೆ ಎಂದು ನೋಡುತ್ತೇನೆ. ನಂತರ ಅನುಭವಿ ತಂಡ ಇದ್ದಲ್ಲಿ ಕಲಿಯುವುದು ಹೆಚ್ಚಿರುತ್ತದೆ ಎಂದು ಭಾವಿಸುತ್ತೇನೆ. ಹಿರಿಯ ಕಲಾವಿದರ ಜೊತೆ ಬೆರೆಯುವುದೇ ದೊಡ್ಡ ಅನುಭವ. 'ವೀಕ್ ಎಂಡ್' ಸಿನಿಮಾದಲ್ಲಿ ಅನಂತ್‌ನಾಗ್ ಅವರ ಜೊತೆ ನಟಿಸುವ ಉದ್ದೇಶಕ್ಕಾಗಿಯೇ ಒಪ್ಪಿದ್ದೆ. ಇತ್ತೀಚೆಗೆ ಪಾತ್ರದ ಆಳ ಅಗಲವನ್ನು ಅಳೆಯುತ್ತೇನೆ. ಪಾತ್ರ ಕಠಿಣವಾಗಿರಬೇಕು. ಸಾಮಾನ್ಯರಿಗೆ ಇಷ್ಟ ಆಗಬೇಕು. ನೈತಿಕ ಮೌಲ್ಯದ ಚೌಕಟ್ಟು ಅದಕ್ಕಿರಬೇಕು. ಕಥೆಯ ಸೂಕ್ಷ್ಮತೆ ಕೂಡ ಮುಖ್ಯವಾಗುತ್ತದೆ. ಅದಕ್ಕೆ ನಾನು ಎಷ್ಟು ನ್ಯಾಯ ಕೊಡಬಲ್ಲೇ ಎಂದು ವಿಚಾರ ಮಾಡಿಯೇ ಒಪ್ಪುತ್ತೇನೆ.

◆ **ಸಿನಿಮಾ, ರಂಗಭೂಮಿ, ಟೀವಿಯ ನಿಮ್ಮ ಅನುಭವವನ್ನು ಹಂಚಿಕೊಳ್ಳುವುದಾರೆ.**

ನಾಲ್ಕೇ ವರ್ಷದಲ್ಲಿ ರಂಗಭೂಮಿ, ಟೀವಿ, ಬೆಳ್ಳಿತೆರೆಯಲ್ಲಿ ಕೆಲಸ ಮಾಡಿದ್ದೇನೆ. ಒಟ್ಟಾರೆ ಫಲಿತಾಂಶ ಚೆನ್ನಾಗಿಯೇ ಸಿಕ್ಕಿದೆ. ಅದರ ಹಿಂದೆ ಅಪಾರ ಶ್ರಮವಿದೆ. ಅನೇಕಬಾರಿ ನಿದ್ದೆ, ಊಟ ಬಿಟ್ಟಿದ್ದೇನೆ. ಮಾನಸಿಕವಾಗಿ ದೈಹಿಕವಾಗಿ ಬಳಲಿದ್ದೇನೆ. ಅಭಿನಯದಲ್ಲಿ ಏಕಾಗ್ರತೆ ಸಾಧಿಸಲು ವ್ರತದಂತೆ ಮನಸ್ಸನ್ನು ನಿಗ್ರಹಿಸಿದ್ದೇನೆ. ಅದರ ಜೊತೆ ಡಯಟ್ ವರ್ಕೌಟ್ ಮಾಡುವುದೂ ಅಗತ್ಯ. ಇದೆಲ್ಲ ಸಿಹಿ, ಕಹಿ, ಹುಳಿ, ಖಾರ ಎಲ್ಲ ಸೇರಿದ ರಸಪಾಕದ ಅನುಭವವನ್ನು ನೀಡಿದೆ. ಸವಿಯುವ ಊಟ ಎಂದರೆ ಸಿಹಿ ಮಾತ್ರ ಅಲ್ಲ, ಹಲವು ರುಚಿಗಳ ಮಿಶ್ರಣ. ಅಷ್ಟೆಲ್ಲ ಕಷ್ಟಪಟ್ಟಿದ್ದರಿಂದಲೇ ಈಗ ಜನ ಗುರುತಿಸುತ್ತಾರೆ. ಒಳ್ಳೆಯ ನಟಿ ಎಂದು ಹೇಳುತ್ತಾರೆ ಅದೇ ಬೇಕಾಗಿರುವುದು. 'ಲಗ್ನಪತ್ರಿಕೆ'ಯಲ್ಲಿ ಹಸನ್ಮುಖಿಯಾಗಿದ್ದರೆ, 'ಪುಟ್ಟಕ್ಕನ ಮಕ್ಕಳು'ನಲ್ಲಿ ಜಿಲ್ಲಾಧಿಕಾರಿಯಾಗಿ ಗಂಭೀರ ಪಾತ್ರ ಮಾಡುತ್ತಿದ್ದೇನೆ. ಇದೆಲ್ಲ ಖುಷಿಯನ್ನು ಕೊಡುತ್ತದೆ.

◆ **ಮುಂದೆ ಸಿನಿಮಾದಲ್ಲಿ ತಾಂತ್ರಿಕವಾಗಿ ಕೆಲಸ ಮಾಡುತ್ತೀರಾ?**

'ಪುಟ್ಟಕ್ಕನ ಮಕ್ಕಳು' ಕೆಲಸ ಆರಂಭವಾಗಿದೆ. ಸದ್ಯ ಎರಡ್ಮೂರು ಸಿನಿಮಾ ಬಿಡುಗಡೆಯಾಗುವ ಹಂತದಲ್ಲಿವೆ. ಅದರಲ್ಲೂ ಕೆಲಸ ಸ್ವಲ್ಪ ಬಾಕಿ ಇದೆ. ಅಂತಿಮ ವರ್ಷದ ಬಿಇ ಓದುತ್ತಿದ್ದೇನೆ. ಮುಗಿದ ನಂತರ ಎಂ.ಎಸ್. ಮಾಡುವ ಉದ್ದೇಶ ಇದೆ. ಕೆಲಸಕ್ಕೆ ಹೋಗಬೇಕೋ ಬೇಡವೋ ಎಂದು ನಿರ್ಧಾರ ಮಾಡಿಲ್ಲ. ಇನ್ನೆರಡು ವರ್ಷ ನೋಡಬೇಕು. ಅಭಿನಯದಲ್ಲೇ ನನ್ನ ಬದುಕು ಕಟ್ಟಿಕೊಳ್ಳಬೇಕು ಎನ್ನುವ ಆಸೆ. ನನಗೆ 9ರಿಂದ 5ಗಂಟೆಯ ಕೆಲಸ ಇಷ್ಟು ಖುಷಿ ಕೊಡುವುದಿಲ್ಲವೇನೋ. ದಿನದಲ್ಲಿ 15 ಗಂಟೆ ಕೆಲಸ ಇದ್ದರೂ ಇಲ್ಲಿ ಖುಷಿಯಾಗಿದ್ದೇನೆ.

■ ರಾಘವೇಂದ್ರ ಕೆ.